ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಉತ್ತರ ಹೇಳಿದ್ದೇನೆ ಇನ್ನೊಮ್ಮೆ ಹೇಳುತ್ತೇನೆ. ಮಾನ್ಯ ಸದಸ್ಯರು ಜಿಲ್ಲಾ ಪರಿಷತ್ ಅಧ್ಯಕ್ಷರುಗಳಿಗೆ ಹಾಗೂ ಉಪಾಧ್ಯಕ್ಷರು ಗಳಿಗೆ ತಿಂಗಳಿಂದಕ್ಕೆ ಖರ್ಚಾಗುವ ಹಣವೆಷ್ಟು ಎಂದು ಕೇಳಿದ್ದಾರೆ, ಅನುಬಂಧ 'ಎ' ನಲ್ಲಿ ಓದಗಿಸ ಲಾಗಿದೆ ಎಂದು ಹೇಳಿದ್ದೇನೆ. ಅದರಲ್ಲಿ ಅವರ ಸಂಬಳ, ಟಿ. ಎ. ಮನೆ ಬಾಡಿಗೆ ಇದೆಲ್ಲಾ ಕೊಟ್ಟು ಇದು ಆಗತಕ್ಕಂಥ ಖರ್ಚು ಎಂದು ಹೇಳಿದ್ದೇನೆ. ಆಮೇಲೆ (ಆ) ಪ್ರಶ್ನೆಯಲ್ಲಿ ಉತ್ತರ ಕನ್ನಡ ಜಿಲ್ಲಾ ಪರಿಷತ್‌ಗೆ ಬಿಡುಗಡೆಯಾದ ಹಣವೆಷ್ಟು ಹಾಗೂ ಸದರೀ ಹಣದಲ್ಲಿ ನಡೆದಿರುವ ಕೆಲಸ ಕಾರ್ಯಗಳೇನು ಎಂದು ಕೇಳಿದ್ದಾರೆ. ಉತ್ತರ ಕನ್ನಡ ಜಿಲ್ಲೆಗೆ ಬಿಡುಗಡೆಯಾದ ಹಣ ರೂಪಾಯಿ ೧೪.೭೨ ಕೋಟಿ. ಇದನ್ನು ಬಜೆಟ್‌ನಲ್ಲಿ ಒದಗಿಸಿದಂತೆ ಖರ್ಚು ಮಾಡಲಾಗುತ್ತದೆ ಎಂದು ಹೇಳಿದ್ದೇನೆ.

ಶ್ರೀ ಗೋಪಾಲ ಮುಕ್ಕುಂದ ಕಾನಜೆ.—ಅಧ್ಯಕ್ಷರ ಸಂಬಳ ೨೨೫೮-೦೦ ರೂಪಾಯಿ ಎಂದು ಕೊಟ್ಟಿದ್ದೀರಿ, ವಾಹನಭತ್ಯೆ ೨೦೦೦-೦೦ ರೂಪಾಯಿ ಎಂದು ಕೊಟ್ಟಿದ್ದೀರಿ. ಇದಕ್ಕೂ ಹೆಚ್ಚು ಖರ್ಚು ಮಾಡಿದರೆ ಅವರ ಕೈಯಿಂದ ತುಂಬಬೇಕೇ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಶಾಸನದ ಪ್ರಕಾರ ಅವರು ಎಷ್ಟು ಖರ್ಚು ಮಾಡಬೇಕೋ ಅಷ್ಟು ಮಾಡಬೇಕು. ಅದಕ್ಕಿಂತ ಹೆಚ್ಚು ಖರ್ಚು ಮಾಡಿದರೆ ರಿಕವರಿ ಆಗುತ್ತದೆ.

ಭೂ ಸೇನಾ ನಿಗಮ.

೩೮೧. ಶ್ರೀ ರಾಜುಗೌಡ(ಹನೂರು).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ವರ್ಕ್ಸ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ವರ್ಷ ಭೂಸೇನಾ ನಿಗಮವು ಗಳಿಸಿದ ಲಾಭವೆಷ್ಟು ?

ಆ) ನಿಗಮವು ಗಳಿಸಿರುವ ಲಾಭವನ್ನು ಯಾವ ರೀತಿ ವಿತರಣೆ ಮಾಡಲಾಗಿದೆ.

ಇ) ನಿಗಮವು ಎಲ್ಲೆಲ್ಲಿ ಸ್ಥಿರ ಆಸ್ತಿಯನ್ನು ಹೊಂದಿದೆ, ಹಾಗೂ ಇದರ ಮೌಲ್ಯ ಎಷ್ಟಾಗ ಬಹುದು ?

ಶ್ರೀ ಅಬ್ದುಲ್ ಜಜೀರ್‌ಸಾಬ್(ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ವರ್ಕ್ಸ್ ಮಂತ್ರಿಗಳು).—

ಅ) ೪೬.೮೧ ಲಕ್ಷ ರೂಪಾಯಿಗಳು.

ಆ) ಲಾಭದ ಹಣದಲ್ಲಿ ಭೂಸೇನೆಯು ಸರ್ಕಾರಕ್ಕೆ ೫ ಲಕ್ಷ ರೂ. ಡಿವಿಡೆಂಡ್ ಕೊಡಲಾಗು ವುದು. ಹಾಗು ಕಾಮಗಾರಿಗಳಿಗೆ ಬೇಕಾಗುವ ಯಂತ್ರೋಪಕರಣಗಳನ್ನು ಕೊಳ್ಳಲಾಗಿದೆ.

ಇ) ನಿಗಮದ ಸ್ಥಿರ ಆಸ್ತಿಗಳ ವಿವರ ಕೆಳಕಂಡಂತಿದೆ.

೧.	ಚಳ್ಳಕೆರೆಯಲ್ಲಿ	೧.೦೦ ಎಕರೆ
೨.	ಬೀದರ್‌ನಲ್ಲಿ	೨.೦೦ ಎಕರೆ

ಸದರಿ ಜಮೀನನ್ನು ಸರ್ಕಾರದವರು ಭೂಸೇನಾ ನಿಗಮಕ್ಕೆ ಕೊಟ್ಟಿರುತ್ತಾರೆ. ಅದರ ಬೆಲೆ ಯನ್ನು ಕಟ್ಟಿರುವುದಿಲ್ಲ.

ಶ್ರೀ ಜಿ. ರಾಜುಗೌಡ.—೫ ಲಕ್ಷ ರೂಪಾಯಿ ಡಿವಿಡೆಂಡ್ ಕೊಡಲಾಗುವುದು ಎಂದು ಹೇಳಿದ್ದೀರಿ, ಇದನ್ನು ಯಾವ ಆಧಾರದ ಮೇಲೆ ನಿಗದಿ ಮಾಡಿದ್ದೀರಿ. ಮತ್ತು ಯಂತ್ರೋಪಕರಣಗಳನ್ನು ಕೊಂಡು ಕೊಳ್ಳಲಿಕ್ಕೆ ಎಷ್ಟು ಖರ್ಚು ಮಾಡಿದ್ದೀರಿ ? ೪೬.೮೧ ಲಕ್ಷ ರೂಪಾಯಿಗಳು ಲಾಭ ಬರಬೇಕಾದರೆ ೧೯೮೬-೮೭ನೇ ಸಾಲಿನಲ್ಲಿ ಭೂಸೇನಾ ನಿಗಮವು ಎಷ್ಟು ವಹಿವಾಟು ಮಾಡಿದೆ ?

ಶ್ರೀ ಅಬ್ದುಲ್ ನಜೀರ್‌ಸಾಬ್ —ಡಿವಿಡೆಂಟ್ ಯಾವರೀತಿ ಕೊಡುತ್ತಾರೆಂದರೆ, ಆ ಕಂಪೆನಿ ಯವರು ಕಂಪೆನಿ ಆಕ್ಟ್ ಪ್ರಕಾರ ಏನು ನಿಯಮಗಳಿಗೆ ಅದರ ಪ್ರಕಾರ ಕೊಡುತ್ತಾರೆ. ೧೯೮೬-೮೭ನೇ ಸಾಲಿನಲ್ಲಿ ವ್ಯಾಲ್ಯು ಆಫ್ ದಿ ವರ್ಕ್ಸ್ ೨೨ ಕೋಟಿ, ೩೬ ಲಕ್ಷ.

ಶ್ರೀ ಜಿ. ರಾಜೂಗೌಡ.—ಲಾಭದಲ್ಲಿ ೨೫ ದಿವಸದ ವೇತನಕ್ಕೆ ಸಮಾನವಾದ ಬೋನಸ್‌ನ್ನು ನೌಕರರಿಗೆ ಕೊಡಲಿಕ್ಕೆ ಆಗುವುದಿಲ್ಲವೇ ? ಎಲ್ಲಾ ಇಲಾಖೆಗಳಲ್ಲೂ ದಿನಗೂಲಿ ೧೨ ರೂಪಾಯಿ ಎಂದು ನಿಗದಿ ಮಾಡಿದ್ದೀರಿ. ಅದೇ ರೀತಿ ಭೂಸೇನಾ ನಿಗಮದಲ್ಲಿ ೧೨ ರೂಪಾಯಿ ಕೊಡಲಿಕ್ಕೆ ಆಗುವುದಿಲ್ಲವೇ ? ಆಮೇಲೆ ಕಳಪೆ ಕೆಲಸ ಮಾಡಿರತಕ್ಕಂಥ ಇಂಜನಿಯರ್‌ಗೆ, ಅಧಿಕಾರಿಗೇ ಜವಾಬ್ದಾರಿ ವಹಿಸುವುದಕ್ಕೆ ತಯಾರಿದ್ದೀರಾ ?

ಶ್ರೀ ಅಬ್ದುಲ್ ನಜೀರ್‌ಸಾಬ್.—೧೨ ರೂಪಾಯಿ ದಿನಗೂಲಿ ಕೊಡಬೇಕಂ ಎಂದು ಹೇಳುತ್ತಿದ್ದಾರೆ. ನೋಟಿಫಿಕೇಷನ್ ಪ್ರಕಾರ ರೂಪಾಯಿ ೯-೮೦ ಕೊಡಲಿಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ. ಆಮೇಲೆ ಕಳಪೆ ಕೆಲಸ ಮಾಡಿರತಕ್ಕ ಇಂಜನಿಯರ್‌ಗೇ ಅದರ ಜವಾಬ್ದಾರಿ ವಹಿಸಿ ಅವರಿಂದ ಮತ್ತೆ ಕೆಲಸ ಮಾಡಿಸತಕ್ಕ ನಿಯಮವು ಭೂಸೇನಾ ನಿಗಮದಲ್ಲಿದೆ.

ಶ್ರೀ ಜಿ. ರಾಜೂಗೌಡ.—೨೫ ದಿವಸಗಳ ವೇತನಕ್ಕೆ ಸಮಾನವಾದ ಬೋನಸ್ ಕೊಡಲಿಕ್ಕೆ ಆಗುವುದಿಲ್ಲವೇ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಈಗಾಗಲೇ ನಾವು ನೌಕರರಿಗೆ ಬೋನಸ್ ಕೊಟ್ಟಿದ್ದೇವೆ.

೧೯೮೪ ರಿಂದ ಈವರೆವಿಗೂ ರಾಜ್ಯದಲ್ಲಿ ಹಂಚಿರುವ ಜನತಾ ಗೃಹಗಳ ನಿವೇಶನ ಮತ್ತು ಜನತಾ ಗೃಹಗಳ ಬಗ್ಗೆ.

ಳಿಟಿರೆ. ಶ್ರೀಮತಿ ನಾಗರತ್ನಮ್ಮ (ಗುಡೆ್ಲಪೇಟೆ).— ಮಾನ್ಯ. ವಸತಿ ಇಲಾಖೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೪ ರಿಂದ ಈವರೆವಿಗೂ ರಾಜ್ಯದಲ್ಲಿ ಹಂಚಿರುವ ಜನತಾ ಗೃಹನಿವೇಶನಗಳು ಜನತಾ ಗೃಹಗಳ ಒಟ್ಟು ಸಂಖ್ಯೆ ಎಷ್ಟು ? (ಜಿಲ್ಲಾವಾರು, ವರ್ಷವಾರು ಮಾಹಿತಿಯನ್ನೊದಗಿಸುವುದು).

ಆ) ಸದರಿ ನಿವೇಶನಗಳಲ್ಲಿ ಎಷ್ಟು ಜನರು ಈಗಾಗಲೇ ಗೃಹಗಳನ್ನು ನಿರ್ಮಿಸಿದ್ದಾರೆ. ಹಾಗೂ ಎಷ್ಟು ಜನತಾ ಮನೆಗಳು ಮುಕ್ತಾಯವಾಗಿವೆ ? (ಜಿಲ್ಲಾವಾರು, ವರ್ಷವಾರು ಮಾಹಿತಿ.)

ಇ) ಜನತಾ ನಿವೇಶನದಲ್ಲಿ ನಿರ್ಮಿಸಿಕೊಟ್ಟಿರುವ ಮನೆಗಳಿಂದ ಸರ್ಕಾರಕ್ಕೆ ಬಾಪಸ್ಸು ಬಂದಿರುವ ಸಾಲದ ಬಾಕಿ ಮೊತ್ತವೆಷ್ಟು ? (ಜಿಲ್ಲಾವಾರು ಮಾಹಿತಿಯನ್ನೊದಗಿಸುವುದು.)

ಶ್ರೀ ಮೊಹಮ್ಮದ್ ಮೊಯಿನುದ್ದೀನ್ (ವಸತಿ ಇಲಾಖೆ ರಾಜ್ಯ ಸಚಿವರು).—

ಅ) ೧೯೮೪ ರಿಂದ ೧೯೮೬ ಇಸವಿಯವರೆಗೆ ಸರ್ಕಾರವು ೧೭೦೭೫ ಜನತಾ ನಿವೇಶನಗಳನ್ನು ಹಂಚಿ ಮತ್ತು ೨೫೯೬೭ ಜನತಾ ಮನೆಗಳನ್ನು ಮಂಜೂರು ಮಾಡಿದೆ.

ಆ) ೧೯೮೪ ರಿಂದ ೧೯೮೬ ರವರೆಗೆ ಸರ್ಕಾರವು ೨೫೯೬೭ ಮನೆಗಳಲ್ಲಿ ೧,೨೩,೫೫೪ ಮನೆಗಳನ್ನು ಪೂರ್ಣಗೊಳಿಸಿದೆ. (ಜಿಲ್ಲಾವಾರು ಮತ್ತು ವರ್ಷವಾರು ಮಾಹಿತಿಯನ್ನು ಅನುಬಂಧ ೧,೨ ಮತ್ತು ೩ ರಲ್ಲಿ ಒದಗಿಸಲಾಗಿದೆ.)

ಇ) ರೂ. ೫೩.೪೫ ಲಕ್ಷಗಳು (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ ೪ ರಲ್ಲಿ ಒದಗಿಸಿದೆ.)